**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರು ಕಛೇರಿ, ಹೊಸ ಸಾರ್ವಜನಿಕ ಕಛೇರಿ
ಪೂರಕ ಕಟ್ಟಡಗಳು ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: RMSA/ಶಾಲಾ ಅನುದಾನ/02/2013-14 ದಿನಾಂಕ: 07-08-2013

## ಸುತ್ತೋಲೆ

ವಿಷಯ: 2013-14ನೇ ಸಾಲಿಗೆ ಶಾಲಾ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ದಿನಾಂಕ:19-06-2013 ರ ಸಭೆಯ PAB ನಡಾವಳಿಗಳು

*********************

2013-14ನೇ ಸಾಲಿನ ವಾರ್ಷಿಕ ಯೋಜನೆ ಅನುಮೋದನೆಗೊಂಡಿದ್ದು ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಿಗೆ 2013-14ನೇ ಸಾಲಿಗೆ 4442 ಸರ್ಕಾರಿ ಪ್ರೌಢ ಶಾಲೆಗಳಿಗೆ ಶಾಲಾ ಅನುದಾನ ಪ್ರತಿ ಶಾಲೆಗೆ ರೂ.50000/- ದಂತೆ ಅನುಮೋದನೆ ಆಗಿರುತ್ತದೆ. ಈ ಅನುದಾನವನ್ನು ರಾಜ್ಯ ಕಛೇರಿಯಿಂದ ನೇರವಾಗಿ ಶಾಲೆಗಳಿಗೆ ಲೆಕ್ಕಶಾಖೆಯಿಂದ ಬಿಡುಗಡೆ ಮಾಡಲಾಗುವುದು. ಈ ಅನುದಾನಗಳು ನೇರವಾಗಿ ಶಾಲೆಗಳಿಗೆ ಬಿಡುಗಡೆ ಆದರೂ ಈ ಅನುದಾನ ಶಾಲೆಗಳಿಗೆ ತಲುಪಿರುವಬಗ್ಗೆ ಖಾತ್ರಿ ಪಡಿಸಿಕೊಳ್ಳುವ, ಮೇಲ್ವಿಚಾರಣೆ ಮಾಡುವ ಅಗತ್ಯ ಮಾರ್ಗದರ್ಶನ ನೀಡುವ ಜವಾಬ್ದಾರಿ ಜಿಲ್ಲಕಛೇರಿಯದ್ದಾಗಿರುತ್ತದೆ. ಮುಖ್ಯ ಶಿಕ್ಷಕರಿಗೆ ಈ ಸುತ್ತೋಲೆಯನ್ನು ತಲುಪಿಸಿ ಶಾಲಾಭಿವೃದ್ಧಿ ಯೋಜನೆ ಸಿದ್ದಪಡಿಸಿ ಎಸ್.ಡಿ.ಎಂ.ಸಿ ಯಲ್ಲಿ ಅನುಮೋದನೆ ಪಡೆದು ಅದರಂತೆ ಅನುದಾನವನ್ನು ಶಾಲೆಯ ಶೈಕ್ಷಣಿಕ ಅಭಿವೃದ್ಧಿಗೆ ಬಳಸಿಕೊಳ್ಳಬೇಕಾಗಿರುತ್ತದೆ.

ಶಾಲಾ ಹಂತದಲ್ಲಿ **'ಶಾಲಾಭಿವೃದ್ಧಿ ಯೋಜನೆ'** (School Development plan) ಸಿದ್ಧಪಡಿಸುವುದು ಆರ್.ಎಂ.ಎಸ್.ಎ. ಅಡಿಯಲ್ಲಿ ಕಡ್ಡಾಯವಾಗಿದ್ದು ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವ ಸೂಚ್ಯಾಂಕಗಳನ್ನು ಈಗಾಗಲೇ ನೀಡಲಾಗಿದೆ. ಆ ಸೂಚ್ಯಾಂಕಗಳನ್ನು ಅನುಸರಿಸಿ ಶಾಲೆಯ ಭೌತಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುವುದು ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶಾಲಾಬವೃದ್ಧಿ ಯೋಜನೆಯ ಸೂಚ್ಯಾಂಕಗಳನ್ನನುಸರಿಸಿ 2013-14 ನೇ ಸಾಲಿಗೆ ಗುರಿಗಳನ್ನು ನಿರ್ಧರಿಸಿಕೊಂಡು ಆ ಗುರಿಗಳ ಸಾಧನೆಗೆ ಶಾಲಾ ಅನುದಾನವನ್ನು ನಿಯಮಾನುಸಾರ ಬಳಸಿಕೊಳ್ಳಲು ತಿಳಿಸಿದೆ.

ಈ ಅನುದಾನವನ್ನು ಶಾಲೆಗಳಲ್ಲಿ ಕಲಿಕಾ ವಾತಾವರಣವನ್ನು ಉತ್ತಮ ಪಡಿಸಲು ಬಳಸಬೇಕಾಗಿದ್ದು ಅನುದಾನಗಳ ಬಳಕೆಯಿಂದ ಶಾಲೆಗಳಲ್ಲಿ ಪ್ರಯೋಗಾಲಯ, ಗ್ರಂಥಾಲಯ, ICT , ಮುಂತಾದ ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಯ ದಾಖಲೀಕರಣ ಮಾಡಲು ಹಾಗು ಇದನ್ನು ಶಾಲಾಭೇಟಿ, ತಪಾಸಣೆ ಸಮಯದಲ್ಲಿ ಪರಿಶೀಲಿಸಲು ಎಲ್ಲಾ ಜಿಲ್ಲಾಹಂತ ಮತ್ತು ತಾಲ್ಲೂಕು ಹಂತದ ಪರಿವೀಕ್ಷಣಾಧಿಕಾರಿಗಳಿಗೆ ತಿಳಿಸಲು ಹಾಗು ಉಪನಿರ್ದೇಶಕರು ನಡೆಸುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪರಿಶೀಲಿಸಲು ತಿಳಿಸಿದೆ. (ಕೇಂದ್ರ ಸರ್ಕಾರ ಸೂಚಿಸಿರುವ ಚಟುವಟಿಕೆಗಳನ್ನು ಲಗತ್ತಿಸಿದೆ.)

ವೆಚ್ಚಗಳನ್ನು RMSA Financial Manual ಪ್ರಕಾರ ಮಾಡಬೇಕಾಗಿದ್ದು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು,ಆ ಸಾಲಿನ ಅನುದಾನವನ್ನು ಅದೇಸಾಲಿನಲ್ಲಿ ವೆಚ್ಚಮಾಡಲು ಹಾಗೂ ವೆಚ್ಚಗಳಿಗೆ ಸಂಬಂಧಿಸಿದ

ದಾಖಲೆಗಳನ್ನು ನಿರ್ವಹಿಸಿ ಆಡಿಟ್‌ಗೆ ಒದಗಿಸಬೇಕಾಗಿರುತ್ತದೆ ಈ ಬಗ್ಗೆ ಮುಖ್ಯಶಿಕ್ಷಕರಿಗೆ ಅಗತ್ಯ ಸೂಚನೆಗಳನ್ನು ನೀಡುವುದು.

ಪ್ರತಿ ತಿಂಗಳು ಅನುದಾನದ ವೆಚ್ಚಗಳ ವಿವರಗಳನ್ನು ಪ್ರತಿ ತಿಂಗಳ 30ನೇ ತಾರೀಖೀಗೆ ಅಂತಿಮಗೊಳಿಸಿ Online ನಲ್ಲಿ ದಾಖಲಿಸುವುದು ಮತ್ತು ಜಿಲ್ಲಾ ಕಛೇರಿಗೆ Hard copy ಕಳುಹಿಸಲು ತಿಳಿಸಿದೆ. ಜಿಲ್ಲಾ ಕಛೇರಿಯವರು Online ನಲ್ಲಿ ಕ್ರೋಢೀಕರಿಸಿ Hard copy ಯೊಂದಿಗೆ ತಾಳೆ ಮಾಡಿ ಜಿಲ್ಲೆಯ ಪ್ರಗತಿಯನ್ನು ಪ್ರತಿ ತಿಂಗಳು ರಾಜ್ಯ ಕಛೇರಿಯಲ್ಲಿ ನಡೆಯುವ DYPC ಸಭೆಗೆ 8ನೇ ದಿನಾಂಕದ ಒಳಗೆ ಕಳುಹಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ,
2. ರಾಜ್ಯದ ಎಲ್ಲಾ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು
3. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. ಮುಂದಿನ ಸೂಕ್ತ ಕ್ರಮಕ್ಕಾಗಿ,
4. ಎಲ್ಲಾ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ. ವಂದನಾ ಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಅಪರ ಆಯುಕ್ತರು ಧಾರವಾಡ ಮತ್ತು ಗುಲ್ಬರ್ಗ ಮಾಹಿತಿಗಾಗಿ
4. ನಿರ್ದೇಶಕರು(ಪ್ರೌಢಶಿಕ್ಷಣ/ಪ್ರಾಥಮಿಕ) ಬೆಂಗಳೂರು ಹಾಗೂ ನಿರ್ದೇಶಕರು ಅಪರ ಆಯುಕ್ತಾಲಯಗಳು ಗುಲ್ಬರ್ಗಾ ಮತ್ತು ಬೆಳಗಾಂ ಮಾಹಿತಿಗಾಗಿ
5. ಕಛೇರಿ ಪ್ರತಿ.